# ಆಧುನಿಕ ಮಹಿಳಾ ಸಾಹಿತ್ಯದ ಕಥಾ ಕಾದಂಬರಿಯ ತೆನೆ – ಎಂ. ಕೆ. ಇಂದಿರಾ

**ಸೋಮಶೇಖರ್ ಎಲ್. ಆರ್.**
ಸಹಾಯಕ ಪ್ರಾಧ್ಯಾಪಕ
ಕನ್ನಡ ವಿಭಾಗ
ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು,
ತುಮಕೂರು.

**Article Link:** https://aksharasurya.com/2023/05/somashekar-l-r/

ಹೆಣ್ಣು ಮಕ್ಕಳಿಗೆ ಓದು ವಿದ್ಯೆಯ ಕಾಲವಲ್ಲ, ಹೊರ ಜಗತ್ತಿಗೆ ಮುಕ್ತವಾಗಿ ತೆರೆದುಕೊಳ್ಳುವ ಶತಮಾನವೂ ಅಲ್ಲ. ಹೊಸ್ತಿಲಾಚೆಗಿನ ವ್ಯವಹಾರದ ಪರಿಚಯವಿಲ್ಲ. ಈ ಎಲ್ಲಾ ಇಲ್ಲಗಳ ನಡುವೆ ತಮ್ಮ ಒಳಗಿನ ಅದಮ್ಯ ಬರಹದ ತುಡಿತಕ್ಕೆ ತಾವಾಗೇ ಹಾದಿ ಕಂಡುಕೊಳ್ಳಲು ಹೊರಟ ಕೆಲವೇ ಕೆಲವು ಹೆಂಗಳೆಯರಲ್ಲಿ ಎಂ.ಕೆ ಇಂದಿರಾ ಸಾಧಿಸಿದ ಜನಪ್ರಿಯತೆ, ಕೀರ್ತಿ ಕನ್ನಡ ಸಾಹಿತ್ಯ ಲೋಕದಲ್ಲಿ ಅವರ ಸಾಧನೆ ವಿಸ್ಮಯಗೊಳಿಸುವಂಥದ್ದು.

ಇವರ ಬರಹಗಳಲ್ಲಿ ಅಂದಿನ ಕಾಲದ ಸಮಾಜದ ಕಟ್ಟು ಕಟ್ಟಳೆ ಸಂಪ್ರದಾಯದ ಚೌಕಟ್ಟು ಸಂಸ್ಕೃತಿಯೆಂಬ ಹೆಸರಿನಲ್ಲಿ ಮಹಿಳೆಯನ್ನು ಬಂದಿಸಿರುವ ವ್ಯವಸ್ಥೆ ಹಾಗೂ ಪುರುಷ ಪ್ರಧಾನ ಸಮಾಜದ ಬಗ್ಗೆ ಧ್ವನಿ ಎತ್ತುತ್ತಾರೆ. ಬಹುತೇಕ ಕೃತಿಗಳು ನೈಜ ಘಟನೆಗಳಿಂದ ಕೊಡಿವೆ. ತಮ್ಮ ಜೀವನದ ಅನುಭವವು ಬರಹದ ರೂಪುತಾಳಿದೆ. ಮಲೆನಾಡಿನ ಚಿತ್ರಣ, ಮೌಲ್ಯಗಳು, ಸರಳತೆ, ಮೌಢ್ಯತೆ ಕುರುಡು ನಂಬಿಕೆ, ದೌರ್ಜನ್ಯಗಳಂತಹ ವಿಚಾರಗಳಲ್ಲಿ ಹೆಚ್ಚು ಬರೆದಿದ್ದಾರೆ.

19ನೇ ಶತಮಾನದಲ್ಲಿ ರೂಪ ತಳೆದ ಕಾದಂಬರಿ ಪ್ರಕಾರವು ಮನೋರಂಜನೆಗೆ ಮಾತ್ರ ಸೀಮಿತವಾಗಿರದೆ ಬದುಕಿನ ಮಹಾಕಾವ್ಯಗಳಂತೆ ಕಾಣಿಸುತ್ತವೆ. ಮಾನವನ ಬದುಕಿನ ರಹಸ್ಯಗಳನ್ನು ತಿಳಿಸುತ್ತವೆ. ಮಹಿಳಾ ಬರಹಗಾರರಲ್ಲಿ ನವೋದಯದ ಕಾಲದಲ್ಲಿ ನಂಜನಗೂಡಿನ ತಿರುಮಲಾಂಭ, ಸರಸ್ವತಿ ಭಾಯಿ ರಾಜವಾಡೆ. ಎಚ್. ವಿ. ಸಾವಿತ್ರಮ್ಮ, ಕಲ್ಯಾಣಮ್ಮ, ಕೂಡಗಿನ ಗೌರಮ್ಮ ತ್ರಿವೇಣಿಯವರ ಸಾಲಿನಲ್ಲಿ ಎಂ. ಕೆ. ಇಂದಿರಾ ಬಹಳ ಪ್ರಮುಖ ಪಾತ್ರವಹಿಸುತ್ತಾರೆ.

ಮಂಡಗದ್ದೆ ಕೃಷ್ಣರಾವ್ ಇಂದಿರಾ 1917 ಜನವರಿ 5 ರಂದು ಶಿವಮೊಗ್ಗ

ಜಿಲ್ಲೆಯ ತೀರ್ಥಹಳ್ಳಿಯಲ್ಲಿ ತರೀಕೆರೆ ಸೂರ್ಯ ನಾರಾಯಣ ರಾವ್ ಮತ್ತು ಬನಶಂಕರಮ್ಮ ದಂಪತಿಗಳ ಮಗಳಾಗಿ ಜನಿಸುತ್ತಾರೆ. ಮಾಧ್ಯಮಿಕ ಶಾಲೆಯಲ್ಲಿ 6ನೇ ತರಗತಿಯವರೆಗೆ ಮಾತ್ರ ಓದಿದ್ದು. 12ನೇ ವಯಸ್ಸಿಗೆ ವಿವಾಹವಾಗುತ್ತದೆ. ತಮ್ಮ 46ನೇ ವಯಸ್ಸಿನಲ್ಲಿ ಬರವಣಿಗೆ ಪ್ರಾರಂಬಿಸಿ ಸುಮಾರು 49 ಕಾದಂಬರಿಗಳನ್ನು 11 ಕಥಾ ಸಂಕಲನಗಳನ್ನು, ಹರಟೆ, ಪ್ರವಾಸ ಕಥನ, ಆತ್ಮಕಥೆ, ಹೀಗೆ ಸಾಹಿತ್ಯದ ಹಲವಾರು ಪ್ರಕಾರಗಳಲ್ಲಿ ಸಾಹಿತ್ಯ ಕೃಷಿಯನ್ನು ಮಾಡಿದ್ದಾರೆ. ಪ್ರಮುಖ ಕಾದಂಬರಿಗಳೆಂದರೆ ತುಂಗಭದ್ರ, ಗೆಜ್ಜೆ ಪೂಜೆ, ಫಣಿಯಮ್ಮ, ತಗ್ಗಿನ ಮನೆ ಸೀತೆ, ಸದಾನಂದ ಹಂಸಗಾನ, ಜಾತಿಗೆಟ್ಟವಳು ಮುಂತಾದವು. ಪ್ರಮುಖ ಕಥಾ ಸಂಕಲನಗಳೆಂದರೆ ದಶಾವಾತಾರ, ಅಂಬರದ ಅಪ್ಸರೆ, ನವರತ್ನ, ಕಲ್ಪನಾ ವಿಲಾಸ, ಅವರ ಆತ್ಮ ಕಥೆ ಬಿಂದು ಅಪೂರ್ಣವಾಗಿದೆ.

ಇವರ ಹಲವಾರು ಕಾದಂಬರಿಗಳು ಚಲನಚಿತ್ರಗಳಾಗಿವೆ. ಅವುಗಳೆಂದರೆ ಗೆಜ್ಜೆ ಪೂಜೆ, ಮುಸುಕು, ಪೂರ್ವಾಪರ, ಗಿರಿಬಾಲೆ, ಫಣಿಯಮ್ಮ, ಜಾಲ, ಹೂ ಭಾಣ, ಮುಂತಾದವು. ಫಣಿಯಮ್ಮ ಚಿತ್ರವು ಪ್ರೇಮಾ ಕಾರಂತರ ನಿರ್ದೇಶನದಲ್ಲಿ ರಾಷ್ಟ್ರ ಪ್ರಶಸ್ತಿಯನ್ನು ಪಡೆದು ಕೊಂಡಿದೆ. ಇಂದಿರಾರವರರಿಗೆ ರಾಜ್ಯ ಸಾಹಿತ್ಯ ಅಕಾಡಮಿ ಪ್ರಶಸ್ತಿ, 1975 ಶ್ರೇಷ್ಠ ಲೇಖಕಿ ಪ್ರಶಸ್ತಿ, ಗೆಜ್ಜೆ ಪೂಜೆ ಚಿತ್ರಕ್ಕೆ ಶ್ರೇಷ್ಠ ಚಿತ್ರಕಥೆ ಪ್ರಶಸ್ತಿ ಹಾಗೂ ಸಾವಿತ್ರಮ್ಮ ದೇಜಗೌ ಪ್ರಶಸ್ತಿ ಲಬಿಸಿದೆ. ಸುರಗಿ ಅಭಿನಂದನಾ ಗ್ರಂಥವು ಸಂದಿದೆ. ತುಂಗಭದ್ರ ಕಾದಂಬರಿಯು ಬೆಂಗಳೂರು ವಿಶ್ವವಿದ್ಯಾನಿಲಯದ ಬಿ.ಎ., ಬಿ.ಎಸ್‌ಸಿ., ಬಿ.ಕಾಂ. ತರಗತಿಗಳಿಗೆ ಪಠ್ಯವಾಗಿತ್ತು. ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಫಣಿಯಮ್ಮ ಕಾದಂಬರಿ ಪಠ್ಯವಾಗಿತ್ತು. ಶ್ರೀಮತಿ ಮಂದಾಕಿನಿ ಪುರೋಹಿತ್‌ರವರು ಎಂ. ಕೆ. ಇಂದಿರಾ ಮತ್ತು ಸಾಹಿತ್ಯ ಎಂಬ ಪ್ರೌಢ ಪ್ರಬಂಧ ಮಂಡಿಸಿ ಪಿಎಚ್.ಡಿ. ಪದವಿ ಪಡೆದು ಕೊಂಡಿದ್ದಾರೆ.

ಇಂದಿರಾರವರಿಗೆ ಮನಸ್ಸಿನಲ್ಲಿ ಬರೆಯಬೇಕೆಂಬ ಹಂಬಲ ಚಿಕ್ಕದಿನಿಂದಲೂ ಬಹಳವಿತ್ತು. ಆದರೆ ಅವಕಾಶ ಸಿಕ್ಕಿರಲಿಲ್ಲಾ. ಮಂಡ್ಯದಲ್ಲಿ ವ್ಯಾಸಂಗ ಮಾಡುವಾಗ ನಿರ್ಮಲ ಎಂಬ ನೂರು ಪುಟಗಳ ಕಾದಂಬರಿಯನ್ನು ಆರು ಪುಟಗಳಿಗೆ ಇಳಿಸಿ ಹಿಂದಿ ಮಾಸ್ಟರಿಂದ ಸೈ ಎನಿಸಿ ಕೊಂಡಿದ್ದರು. ತ್ರಿವೇಣಿಯವರ ಪ್ರಭಾವವು ಬೀರಿತು. ಅವರು ಓದಿ "ಕಥನ ಕಲೆ ಹೃದ್ಗತವಾಗಿದೆ ಬರೆಯಿರಿ" ಎಂದರು. ಇದರ ಪ್ರೇರಣೆಯಿಂದ "ಹಳ್ಳಿಗಾತಿ ಮತ್ತು ಪಶ್ಚಿಮ ಕರಾವಳಿ" ಎಂಬ ಎರಡು ಕಥೆಗಳನ್ನು ಮೊದಲಿಗೆ ಬರೆಯುತ್ತಾರೆ. ನಾಲ್ಕು-ಐದು ವರ್ಷಗಳನಂತರ ಮೊದಲ ಕಾದಂಬರಿ 'ತುಂಗಭದ್ರ' ಬರೆಯುತ್ತಾರೆ. ಇದು ನೈಜ ಘಟನೆಗಳಿಂದ

ಕೂಡಿದ್ದು, ಬರೆದ ನಂತರ ಮನೋಹರ ಗ್ರಂಥಮಾಲೆಗೆ ಜಿ. ಬಿ. ಜೋಷಿಯವರಿಗೆ ಕಳುಹಿಸುತ್ತಾರೆ. ಮೂಲ ಹಸ್ತಪತಿ ಕಳೆದು ಹೋಗುತ್ತದೆ ಎಂಟು ತಿಂಗಳಾದರೂ ಪ್ರಕಟವಾಗುವುದಿಲ್ಲ. ನಂತರ ಇಂದಿರಾರವರು ಹನೇರಡು ದಿನಗಳಲ್ಲಿ ಈ ಕಾದಂಬ–ರಿಯನ್ನು ಮತ್ತೆ ಬರೆಯುತ್ತಾರೆ. ಅವರ ನೆನಪಿನ ಶಕ್ತಿ ಆಗಾಧವಾದದ್ದು. ಒಂದೆ ವಾರದಲ್ಲಿ ಪ್ರಕಟಗೊಳ್ಳುತ್ತದೆ. ಕೀರ್ತನಾಥ ಕುರ್ತಕೋಟಿಯವರು ಮುನ್ನುಡಿಯನ್ನು ಬರೆಯುತ್ತಾರೆ. ಈ ಕಾದಂಬರಿಗೆ 400 ರೂ. ಗೌರವ ಧನವನ್ನು ಹಾಗೂ 40 ಪ್ರತಿಗಳನ್ನು ಕಳುಹಿಸಿ ಕೂಡುತ್ತಾರೆ. ಸಾಹಿತ್ಯಕ್ಕೆ ಇರುವ ಮಹತ್ವ ಅರಿವಾಗುತ್ತದೆ. ತುಂಗಭದ್ರ ನಿಜ ಜೀವನದಲ್ಲಿ ಹೊಳೆಗೆ ಬಿದ್ದು ಸಾಯುತ್ತಾಳೆ. ಆದರೆ ಕಾದಂಬ–ರಿಯಲ್ಲಿ ಆಕೆಯನ್ನು ಬದುಕಿಸುವ ಮೂಲಕ ಆಧುನಿಕ ಮನೋಭಾವವನ್ನು ಹುಟ್ಟು ಹಾಕುತ್ತಾರೆ.

ಇವರ ಕಾದಂಬರಿಗಳಲ್ಲಿ ಪ್ರಾಕೃತಿಕ ಅಂಶಗಳನ್ನು ಬಹಳ ವಿಪುಲವಾಗಿವೆ. ಮಲೆನಾಡಿನ ಕಂಪು–ಇಂಪುಗಳಿವೆ. ಕುವೆಂಪು ಅವರನ್ನು ಹೊರತು ಪಡಿಸಿದರೆ ಇವರೆ ಸಹ್ಯಾದ್ರಿಶ್ರೇಣಿ, ಹಕ್ಕಿಗಳ ಇಂಚರ, ಭಾಷೆಯ ಬಳಕೆ ಮಲೆನಾಡಿನ ಸೊಬಗನ್ನು ಕಾಣಬಹುದಾಗಿದೆ. ವಾಸ್ತವದ ಸಂಗತಿಗಳಿಗೆ ಹೆಚ್ಚು ಬೆಲೆ ಕೊಟ್ಟಿದು ಇವರ ಬರವಣಿಗೆ ಕಲ್ಪನೆ ಮತ್ತು ವಾಸ್ತವದ ಘಟನೆಗಳನ್ನು ಹೊಂದಿಸುವಂತಿದೆ. ಇವರ ಬರವಣಿಗೆಯಲ್ಲಿ ಸಾಮಾಜಿಕ ಅಂಶಗಳು ಮುಖ್ಯವಾಗಿ ಕಂಡು ಬರುತ್ತವೆ. ಸಾಹಿತ್ಯವು ಸಾಮಾಜಿಕ ಸಮಸ್ಯೆಗಳಿಗೆ ಸ್ಪಂದಿಸುವಂತಿದೆ. ಜನ ಸಾಮಾನ್ಯರ ಬದುಕು ಬವಣೆಗಳನ್ನು ತಮ್ಮ ಬರವಣಿಗೆಯಲ್ಲಿ ಪ್ರಸ್ತಾಪಿಸುತ್ತಾರೆ. ಇವರ ಕಾದಂಬ–ರಿಗಳಲ್ಲಿ ಪರುಷ ಪ್ರಧಾನ ಸಮಾಜದಲ್ಲಿನ ಹೆಣ್ಣಿನ ಸ್ಥಿತಿ ಗತಿ, ಬಾಲ್ಯ ವಿವಾಹ, ವಿಧವೆಯರ ನೋವಿನ ಜೀವನ, ವೇಶ್ಯಾ ಪದ್ದತಿ ಮೌಲ್ಯಗಳ ಹೆಸರಿನಲ್ಲಿ ಮೌಢ್ಯಗಳ ಆಚರಣೆಯನ್ನು ವಿರೋಧಿಸುತ್ತಾರೆ. ಮೂಢ ನಂಬಿಕೆಗಳನ್ನು ವಿರೋಧಿಸುವ ಮೂಲಕ ತಮ್ಮ ಬರಹಗಳಲ್ಲಿ ಸಂಪ್ರದಾಯಗಳನ್ನು ಪ್ರಶ್ನಿಸುತ್ತಾರೆ.

ಇವರ ಸಾಹಿತ್ಯದಲ್ಲಿ ಸ್ತ್ರೀವಾದದ ಎಳೆಗಳನ್ನು ಕೂಡಾ ಹೆಚ್ಚಳವಾಗಿ ಗುರ್ತಿಸಬಹುದಾಗಿದೆ. ಪಾಶ್ಚಾತ್ಯ ದೇಶಗಳಲ್ಲಿ ಹುಟ್ಟಿ ಕೊಂಡ ಸ್ತ್ರೀ ವಾದವನ್ನು ತಿಳಿಯದಿದ್ದರೂ ನಮ್ಮ ಸಮಾಜದಲ್ಲಿ ಸ್ತ್ರೀಯರಿಗಾಗುವ ಅನ್ಯಾಯ ಮತ್ತು ತಾರತಮ್ಯಗಳ ಬಗ್ಗೆ ಪರಿಣಾಮಕಾರಿ ಚಿತ್ರಣವನ್ನು ಕೊಟ್ಟಿದ್ದಾರೆ. ಸ್ತ್ರೀ ಸಾಹಿತ್ಯವೆಂದರೆ ಬರಿ ಅಡುಗೆ ಮನೆಯ ಸಾಹಿತ್ಯವೆಂದು ತಾತ್ಸಾರದಿಂದ ಕಾಣುವ ಓದುವ ವರ್ಗ ಬೆರಗಾಗುವಂತಹ ಸಾಹಿತ್ಯವನ್ನು ರಚಿಸಿದವರು ಎಂ. ಕೆ. ಇಂದಿರಾರವರು. ಪುರುಷ ಪ್ರಧಾನ ಸಮಾಜದ ದಬ್ಬಾಳಿಕೆಯನ್ನು ಬ್ರಾಹ್ಮಣ ಕುಟುಂಬದಲ್ಲಿ

ಜನಿಸಿ ಅಲ್ಲಿ ಮಹಿಳೆಯರು ಎದುರಿಸುವ ಸಮಸ್ಯೆಗಳ ಬಗ್ಗೆ ಅವರ ಫಣಿಯಮ್ಮ ಕಾದಂಬರಿ ಬೆಳಕು ಚಲುತ್ತದೆ. ಲಿಂಗ ತಾರತಮ್ಯವು ವರ್ಣ ತಾರತಮ್ಯ, ಜಾತಿ ತಾರತಮ್ಯಗಳಿಗಿಂತ ಹೆಚ್ಚಾಗಿ ಎಲ್ಲಾ ಜನಾಂಗಗಳಲ್ಲೂ ಕಂಡು ಬರುತ್ತದೆ ಎಂದು ತಿಳಿಸುತ್ತಾರೆ. ಮಾನವರು ಮಾನವೀಯ ನೆಲೆಗಟ್ಟಿನಲ್ಲಿ ಬದುಕಬೇಕೆಂದು ತಿಳಿಸುತ್ತಾರೆ. ಹೆಣ್ಣು ಅಬಲೆಯಲ್ಲ ಸಬಲೆ ಎಂತಹ ಪರಿಸ್ಥಿತಿಗಳನ್ನು ಕೂಡಾ ಸಮರ್ಥವಾಗಿ ನಿರ್ವಹಿಸಬಲ್ಲಳು ಎಂದು ತಮ್ಮ ಸಾಹಿತ್ಯದಲ್ಲಿ ವ್ಯಕ್ತಪಡಿಸಿದ್ದಾರೆ.

ತಮ್ಮ ಫಣಿಯಮ್ಮ ಕಾದಂಬರಿಯಲ್ಲಿ ಬಾಲ ವಿಧವೆಯ ಜೀವನದ ಬಗ್ಗೆ ತಿಳಿಸುತ್ತದೆ. ಸಂಪ್ರದಾಯಸ್ಥ ಕುಟುಂಬಗಳಲ್ಲಿ ಹೆಣ್ಣನು ಹೇಗೆ ರೂಪಿಸುತ್ತಿದ್ದರು ಎಂದು ಸಮಾಜದ ವ್ಯವಸ್ಥೆಯನ್ನು ತೆರೆದಿಡುತ್ತಾರೆ. ಕಾದಂಬರಿಯಲ್ಲಿ ಬರುವ ಪುಟ್ಟಾಜೋಯಿಸರು ಮತ್ತು ಸುಬ್ಬಿಯರ ಪ್ರಸಂಗ, ಸುಬ್ಬಾರಾಯರ ಪ್ರಸಂಗವು ಪುರುಷರಿಗೆ ಯಾವ ಮಡಿ ಮೈಲಿಗೆಗಳಿಲ್ಲಾ ಆದರೆ ಮಹಿಳೆಯರಿಗೆ ಮಾತ್ರ ಈ ಆಚರಣೆಗಳೇಕೆ ಎಂಬ ಸೂಕ್ಷ್ಮವಾದ ಪ್ರಶ್ನೆಗಳನ್ನು ಕಾದಂಬರಿಯಲ್ಲಿ ಎತ್ತಿದ್ದಾರೆ. ಭೈರನ ಮಗಳು ಸಂಕಿಯ ಪ್ರಸವದ ಸಂದರ್ಭವು ಆಧುನಿಕತೆ ಮತ್ತು ಪರಂಪರೆಯನ್ನು ಮುಖಾಮುಖಿಯಾಗಿಸುತ್ತದೆ. ದಾಕ್ಷಾಯಿಣಿ ವ್ಯವಸ್ಥೆಯ ವಿರುದ್ಧ ತಿರುಗಿ ಬಿಳುವ ಆಧುನಿಕ ಹಾಗೂ ಧೈರ್ಯದ ಸಂಕೇತವಾಗಿ ಕಂಡು ಬರುತ್ತಾಳೆ.

ಕನ್ನಡದ ಖ್ಯಾತ ವಿಮರ್ಶಕರಾದ ಜಿ. ಎಸ್. ಅಮೂರರವರು ಹೇಳುವಂತೆ "ಫಣಿಯಮ್ಮ ಕೇವಲ ಒಬ್ಬ ಅಸಾಮಾನ್ಯ ವ್ಯಕ್ತಿಯ ಜೀವನ ಚರಿತ್ರೆಯಾಗಿರದೆ ಮಹಿಳಾ ಪ್ರಜ್ಞೆಯಲ್ಲಿ ಮೂಡಿ ಬಂದಿರುವ ಕೃತಿಯಾಗಿದೆ" ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದಾರೆ.

ಇಂದಿರಾರವರ ಮತ್ತೊಂದು ಅತ್ಯಂತ ಜನಪ್ರಿಯವಾದ ಕಾದಂಬರಿ 'ಗೆಜ್ಜೆ ಪೂಜೆ' ಇವರು ಮೈಸೂರಿನಲ್ಲಿದ್ದಾಗ ಇಬ್ಬರು ಪ್ರೇಮಿಗಳು ಆತ್ಮಹತ್ಯೆ ಮಾಡಿಕೊಂಡದ್ದು ಈ ಕಾದಂಬರಿ ರಚನೆಗೆ ಮೂಲ ಪ್ರೇರಣೆಯಾಯಿತು. ಸಾಮಾಜಿಕ ಸಮಸ್ಯೆಯಾದ ವೇಷ್ಯಾ ಪದ್ಧತಿಯ ಬಗ್ಗೆ ಕಾದಂಬರಿ ಧ್ವನಿಯಾಗಿದೆ. ಸಮಾಜವು ಇವರನ್ನು ಹೇಗೆ ನೋಡುತ್ತಾರೆಂದು ತಿಳಿಸುತ್ತಾರೆ. ಕನ್ನಡ ಸಾಹಿತ್ಯ ಲೋಕದಲ್ಲಿ ಶಿವರಾಮ ಕಾರಂತರ ಕನ್ಯಾಬಲಿ, ತ್ರಿವೇಣಿಯವರ ಹೂವು ಹಣ್ಣು, ಅ.ನ.ಕೃ. ರವರ ನಗ್ನ ಸತ್ಯ, ಶನಿ ಸಂತಾನ ಈ ಕಾದಂಬರಿಗಳು ವೇಷ್ಯಾ ಸಮಸ್ಯೆಯ ಬಗ್ಗೆ ಚರ್ಚಿಸಿವೆ.

ಕಾದಂಬರಿಯಲ್ಲಿ ಶೂದ್ರರು ಬಳಸುವ ಕೆರೆ ನೀರಿನಲ್ಲಿ ತಾವರೆಯನ್ನು

ನೋಡಿ ಆಸೆ ಪಟ್ಟು ಗೆಳೆಯರ ಸಹಾಯದಿಂದ ತಾವರೆಯನ್ನು ಕಿತ್ತು ತರುವ ಸೋಮನ್ನು ಅವರ ತಾಯಿಯಾದ ತಂಗಮ್ಮ ಕಿತ್ತು ಬಿಸಾಡಿ ಸೋಮನ್ನು ಶುದ್ಧಿ ಮಾಡುತ್ತಾರೆ. ಇದು ಅಂದಿನ ಕಾಲದ ಜಾತಿ ಪದ್ದತಿಯ ಪ್ರತೀಕವಾಗಿ ಮೂಡಿ ಬಂದಿದೆ. ಕಾದಂಬರಿಯ ನಾಯಕಿಯಾದ ಚಂದ್ರಾಳಿಗೆ ಎಲ್ಲಾ ಸ್ತ್ರೀಯಂತೆ ಬದುಕುವ ಆಸೆಯುಂಟಾಗುತ್ತದೆ ಆದರೆ ಸಂಪ್ರದಾಯವಾದಿ ಸಮಾಜವು ಇದನ್ನು ಸ್ವೀಕ–ರಿಸುವುದಿಲ್ಲ ಚಂದ್ರಾಳ ತಂದೆಯಾದ ಚಂದ್ರಶೇಖರ್‌ರ ಭೇಟಿಯಾಗುತ್ತದೆ. ಅರ್ಪಣ ಹಾಗೂ ಚಂದ್ರಾ ತುಂಬಾ ಸಂತೋಷ ಪಡುತ್ತಾರೆ. ಆದರೆ ಸಮಾಜಕ್ಕೆ ಹೆದರಿ ಚಂದ್ರಶೇಖರ್ ನಾನೆ ತಂದೆ ಎಂದು ಸಮಾಜಕ್ಕೆ ತಿಳಿಯಬಾರದೆಂದು ಹೇಳಿದಾಗ ಚಂದ್ರಾಳ ಜೀವನದ ಕನಸು ಚೂರಾಗುತ್ತದೆ. ಅಂದಿನವರೆಗೆ ಗೆಜ್ಜೆ ಪೂಜೆಯನ್ನು ನಿರಾಕರಿಸಿದ ಚಂದ್ರಾ ತನ್ನ ಅಜ್ಜಿಯಾದ ಸಂಗವ್ವನಿಗೆ ಹೇಳಿ ನಾನು ಸಿದ್ದಳಿದ್ದೇನೆ ಗೆಜ್ಜೆ ಪೂಜೆ ಮಾಡಿಸಿ ಎಂದು ಕೇಳುವ ಸಂದರ್ಭ ಇಡೀ ಪುರುಷ ಪ್ರಧಾನ ವ್ಯವಸ್ಥೆಯನ್ನು ಪ್ರಶ್ನಿಸುತ್ತದೆ. ಆಕೆಯ ಸಾವು ಸಮಾಜದ ವ್ಯವಸ್ಥೆಯ ಪ್ರತಿರೋಧದ ಸಂಕೇತವಾಗಿ ಕಂಡು ಬರುತ್ತದೆ. ಕಾದಂಬರಿಯಲ್ಲಿ ತೀರ್ಥಹಳ್ಳಿ ಹಾಗೂ ಹಳೆ ಮೈಸೂರು ಭಾಷೆ ಬಳಕೆ ಅತ್ಯಂತ ಮಧುರ ಸೊಬಗನ್ನು ನೀಡಿದೆ.

ಇವರ ಮತ್ತೊಂದು ಕಾದಂಬರಿಯಾದ 'ಸದಾನಂದ' 1965ರಲ್ಲಿ ಪ್ರಕಟಗೊಳ್ಳುತ್ತದೆ. 343 ಪುಟಗಳಿರುವ ಕಾದಂಬರಿಯಲ್ಲಿ ಕಥಾನಾಯಕ ಸದಾನಂದ ಕಾದಂಬರಿಯ ಅರ್ಧಭಾಗದಿಂದ ಕಾಣಿಸಿಕೊಳ್ಳುತ್ತಾನೆ. ಆಧುನಿಕ ಮನಸ್ಸಿನ ವ್ಯಕ್ತಿಯಾಗಿ ಕಂಡುಬರುತ್ತಾನೆ. ಬದಲಾಗುತ್ತಿರುವ ಸನ್ನಿವೇಷಗಳಲ್ಲಿ ಹಳೆಯ ಮೌಲ್ಯಗಳ ಅಪಮೌಲೀಕರಣ ಮಾಡಲು ಮುಂದಾಗುತ್ತಾನೆ. ಬಾಲ ವಿಧವೆಯಾದ ಕಮಲಾಳನ್ನು ವಿವಾಹವಾಗುವ ಮೂಲಕ ಸಮಾಜಿಕ ಸುಧಾರಣೆಯ ವ್ಯಕ್ತಿಯಾಗಿ ಮೂಡಿಬಂದಿದ್ದಾನೆ. ಇವರ 'ಮಧುವನ' ಕಾದಂಬರಿಯು ಸದಾನಂದ ಕಾದಂಬ–ರಿಯ ಮುಂದುವರೆದ ಭಾಗವಾಗಿದೆ. ಸದಾನಂದ ಕಮಲಾಳನ್ನು ವಿವಾಹವಾಗಿ ಅವರ ತಾಯಿ ಮತ್ತು ಅಲ್ಲಿನ ಜನ ಹೇಗೆ ನಡೆಸಿಕೊಳ್ಳುತ್ತಾರೆ ಎಂದು ತಿಳಿಸುವುದಾಗಿದೆ.

'ಜಾತಿಗೆಟ್ಟವಳು' ಕಾದಂಬರಿಯಲ್ಲಿ ವಾಸುದೇವಾ ನೀರಜಾಕ್ಷಿಯವರ ಪ್ರೇಮ ವಿವಾಹದ ಬಗ್ಗೆ ತಿಳಿಸುತ್ತಾರೆ. ಕೆಳಜಾತಿಯ ನೀರಜಾಕ್ಷಿಯನ್ನು ಸುಸಂಸ್ಕಾರ ಕುಟುಂಬದ ವಾಸುದೇವ ವಿವಾಹವಾಗುವ ಮೂಲಕ ಜಾತಿ ಪದ್ದತಿಯನ್ನು ಉಲ್ಲಂಘಿಸುತ್ತಾನೆ. ಇದಕ್ಕೆ ಆರ್ಥಿಕ ಸಭಲತೆ ಮುಖ್ಯ ಕಾರಣ ಎಂದು ಕಾದಂಬ–ರಿಯು ತಿಳಿಸುತ್ತದೆ. ಕೆಳ ಜಾತಿಯವರ ಸಾಮಾಜಿಕ ಸ್ತರ ವಿನ್ಯಾಸ ಬದಲಾಗಬೇಕಾದರೆ ಆರ್ಥಿಕ ಸಭಲತೆ ಬಹಳ ಪ್ರಮುಖವಾಗಿದೆ.

ಸಮಾಜದ ಸಾಮಾಜಿಕ ಪಿಡುಗುಗಳು, ಸಮಸ್ಯೆಗಳನ್ನು ಬರಹದ ವಸ್ತುವನ್ನಾಗಿಸಿಕೊಂಡು ಆಡು ಮಾತಿನಲ್ಲೆ ಹೃದಯಕ್ಕೆ ಹತ್ತಿರವಾಗುವ ಧ್ವನಿ ಪೂರ್ಣ ಭಾಷೆಯಲ್ಲಿ ನೇರವಾಗಿ ನಿರೂಪಿಸಿದ್ದಾರೆ. ಹೊರ ಜಗತ್ತಿನ ಯಾವುದೇ ಪ್ರಭಾವಕ್ಕೆ ಒಳಗಾಗದೆ ಅಪ್ಪಟ ಕನ್ನಡದ ನೆಲದ ಅದರಲ್ಲೂ ಮಲೆನಾಡಿನ ಪರಿಸರದ ಮತ್ತು ಜೀವನಾನುಭವದ ಸಂಪತ್ತಿನಿಂದ ಪಕ್ವವಾದ ಮನಸ್ಸಿನಿಂದ ತನ್ನದೇ ವಿಶಿಷ್ಠವಾದ ಶೈಲಿಯಲ್ಲಿ ಸಾಹಿತ್ಯ ರಚಿಸಿ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸಿದ ಅಪರೂಪದ ಲೇಖಕಿ ಎಂ. ಕೆ. ಇಂದಿರಾ. ನಿರಾಡಂಬರದ ನಿರೂಪಣೆ ಹಾಗೂ ಅಪ್ಪಟ ದೇಸಿತನವಿದೆ ಇವರ ಬರವಣಿಗೆಯಲ್ಲಿ. ಸಮಾಜದ ಒಳಿತು ಕೆಡುಕುಗಳನ್ನು ಓರೆಗೆ ಹಚ್ಚುವ ತೀಕ್ಷ್ಣವಾದ ತೀವ್ರತೆಯನ್ನು ಕಾಣಬಹುದಾಗಿದೆ. ಅನಿಷ್ಟವಾದ ಸಂಪ್ರದಾಯಗಳನ್ನು ಟೀಕಿಸುವ, ಮೂಡನಂಬಿಕೆಗಳನ್ನು ಪ್ರಶ್ನಿಸುವ ಎದೆಗಾ–ರಿಕೆಯನ್ನು ಕಾಣಬಹುದಾಗಿದೆ.

ಸ್ತ್ರೀವಾದದ ಸುಳಿವು ಇಲ್ಲದ ಕಾಲದಲ್ಲಿ ಸ್ತ್ರೀವಾದದ ಬಗ್ಗೆ ಅವರ ಬರಹಗಳು ಮೂಡಿಬಂದಿರುವುದು ಮಹಿಳಾ ಸಬಲೀಕರಣಕ್ಕೆ ಮುನ್ನುಡಿಯಾಗಿದೆ. ಇಂದಿರಾರವರ ಬರವಣಿಗೆಯನ್ನು ತುಂಬಾ ಆಸಕ್ತಿಯಿಂದ ಓದಿದ ಪು.ತಿ.ನ. ರವರು ಅವರ ಬರವಣಿಗೆಯನ್ನು ಕುರಿತು ಹೀಗೆ ಹೇಳಿದ್ದಾರೆ: "ಎಂ. ಎಸ್. ಪುಟ್ಟಣ್ಣನವರನ್ನು ಬಿಟ್ಟರೆ ಅಷ್ಟೆ ಮೋದಕವಾಗಿ ಹಾಗೂ ಬನಿಯಾದ ಕನ್ನಡವನ್ನು ಕಾಣುವುದು ಶ್ರೀಮತಿ ಇಂದಿರಾರವರ ಕಾದಂಬರಿಗಳಲ್ಲಿ" ಎಂದಿದ್ದಾರೆ. ಈ ಮಾತುಗಳು ಇಂದಿರಾರವರ ಬರವಣಿಗೆಯ ಶ್ರೀಮಂತಿಕೆಗೆ ಹಿಡಿದ ಕೈಗನ್ನಡಿಯಾಗಿದೆ. ವಿಮರ್ಶಕರಿಗೆ ಹೆಚ್ಚಿನ ಮಹತ್ವವನ್ನು ಕೊಟ್ಟವರಲ್ಲ ಇವರು. ಇವರು "ನನ್ನ ಕೆಲಸ ಬರವಣಿಗೆ ಮಾತ್ರ ಜನ ಅದನ್ನು ಮೆಚ್ಚಿದ್ದಾರೆ ವಿಮರ್ಶಕರು ಏನಾದರೂ ಬರೆಯಲ್ಲಿ ನನ್ನಗೇನು ಅನಿಸುವುದಿಲ್ಲ" ಎಂದು ತಮ್ಮ ಮುಗ್ಧವಾದ ಭಾವನೆಗಳನ್ನು ಹೊರ ಹಾಕುತ್ತಾರೆ.

ಇವರ ಸಂಪೂರ್ಣವಾದ ಸಾಹಿತ್ಯದ ಬಗ್ಗೆ ಹೇಳುವುದಾದರೆ ಸುವಾಸನೆಯನ್ನು ಮತ್ತು ಕಂಪನ್ನು ಹರಡುವ ಮಲೆನಾಡಿನ ಸುರಗಿ ಹೂವಿನಂತೆ ಸಾಹಿತ್ಯ ಲೋಕದಲ್ಲಿ ತಡವಾಗಿ ಅರಳಿ ದಟ್ಟವಾದ ಸುವಾಸನೆಯನ್ನು ಕನ್ನಡ ನಾಡಿನಾದ್ಯಂತ ಹರಡಿದ ಲೇಖಕಿ ಎಂದರೆ ಅದು ಶ್ರೀ ಮತಿ ಎಂ. ಕೆ. ಇಂದಿರಾ ಎಂದು ಹೇಳಿದರೆ ಅದು ಅತ್ತಿಶಯೋಕ್ತಿ ಅಲ್ಲವೆನ್ನಬಹುದು.

**ಪರಾಮಶ್ರನ ಗ್ರಂಥಗಳು**


1. ಡಾ. ಎಸ್. ಎಸ್. ಭಗವತಿ ಮತ್ತು ಎಚ್. ಎಸ್. ಮೇಲಿನಮನಿ: ಹೊಸಗನ್ನಡ ಸಾಹಿತ್ಯಾಲೋಕನ
2. ಎಂ. ಕೆ. ಇಂದಿರಾರವರ ಕಾದಂಬರಿಗಳು
3. ಕೀರ್ತನಾಥ ಕುರ್ತುಕೋಟಿ: ನೂರು ಮರ ನೂರು ಸ್ವರ.
4. ಡಿ. ಎಲ್. ನರಸಿಂಹಚಾರ್ಯ: ಲೇಖನ ಮತ್ತು ಪೀಠಿಕೆಗಳು.
5. ಎಂ. ಕೆ. ಇಂದಿರಾರವರ ಸಂದರ್ಶನ. ದಿನಾಂಕ 25 ಮಾರ್ಚ್ 1989 ನಲ್ಲಿ ನೇಮಿಚಂದ್ರ ಹಾಗೂ ಶೇಷನಾರಾಯಣರವರು ನೆಡೆಸಿದ ಸಂದರ್ಶನ.